ಡಿ.ಡಬ್ಲ್ಯೂ.1

**<u>ದಿನಾಂಕಃ 10.08.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು</u>**

**<u>ಮುಂದುವರೆದ ಮುಖ್ಯ ವಿಚಾರಣೆಃ ಆರೋಪಿ ಪರ ವಕೀಲರಿಂದ</u>**

2. ದೂರುದಾರರು ಚೀಟಿ ಕೂಗುವ ಸಮಯದಲ್ಲಿ ನಾನು ಹಾಜರಿರಲಿಲ್ಲ, ಆದರೆ ಮೂರು ನಾಲ್ಕು ದಿವಸದ ನಂತರ ಚೀಟಿ ನಿಮ್ಮ ಹೆಸರಿಗೆ ಆಗಿದೆ ಎಂದು ಫೋನ್ ಮುಖಾಂತರ ತಿಳಿಸಿರುತ್ತಾರೆ. ನನಗೆ ಚೀಟಿ ಹಾಕುವ ಸಮಯದಲ್ಲಿ ರೂ.16,75,000/- ಕೊಡುತ್ತೇನೆಂದು ಹೇಳಿದರು. ಅದರೆ ಕಮಿಷನ್ ಗೆ ರೂ.1,20,000/- ತೆಗೆದಿರುತ್ತೇವೆಂದು ನನ್ನ ಕೈಗೆ ರೂ.15,57,000/- ವನ್ನು ನನ್ನ ಬ್ಯಾಂಕ್ ಖಾತೆಗೆ ವರ್ಗಾಯಿಸಿರುತ್ತಾರೆ. ನಾನು 13 ಕಂತುಗಳನ್ನು ಮಾತ್ರ ಕಟ್ಟಬೇಕಾಗಿತ್ತು ಆದರೆ ಈಗ ನನ್ನ ಮೇಲೆ ಇಲ್ಲಿ ಒಂದು ರೂ.11,75,000/-, ಮಲ್ಲೇಶ್ವರಂನಲ್ಲಿ ರೂ.18,87,000/- ಒಟ್ಟು ರೂ.30,46,000/- ಕ್ಕೆ ಪ್ರಕರಣಗಳನ್ನು ದಾಖಲಿಸಿರುತ್ತಾರೆ. ಚೀಟಿ ಹಣ ಬ್ಯಾಂಕಿಗೆ ವರ್ಗಾಯಿಸುವ ಸಮಯದಲ್ಲಿ ನನ್ನಿಂದ ಎರಡು ಚೆಕ್ಕುಗಳನ್ನು ಹಾಗೂ ಖಾಲಿ ಹಾಳೆಗೆ ಭದ್ರತೆಗೆಂದು ಸಹಿ ಪಡೆದುಕೊಂಡಿರುತ್ತಾರೆ. ನನ್ನಲ್ಲದೆ ನನಗೆ ಜಾಮೀನುದಾರರಾಗಿದ್ದ 6 ಜನರ ಮೇಲೆ ನೋಟಿಸ್ ಕಳುಹಿಸಿರುತ್ತಾರೆ. ನನ್ನ ತಾಯಿಯ ನಿವೇಶನದ ಮೇಲೆಯು ಸಹ ಸಿವಿಲ್ ಪ್ರಕರಣ ದಾಖಲಿಸಿ ಉಪ ನೋಂದಾವಣಿ ಕಛೇರಿಯಲ್ಲಿ ಇಸಿ ನಲ್ಲಿ ನೋಂದಾಣಿ ಮಾಡಿಸಿಕೊಂಡಿರುತ್ತಾರೆ. ಈ ಆದೇಶವನ್ನು ಉಚ್ಛ ನ್ಯಾಯಾಲಯದಲ್ಲಿ ಪ್ರಶ್ನಿಸಿರುತ್ತೇನೆ. ಈ ಪ್ರಕರಣದಲ್ಲಿ ವಕೀಲರ ಮೂಲಕ ನೋಟಿಸ್ ಬಂದಿದ್ದು, ಉತ್ತರ ಕೊಟ್ಟಿರುತ್ತೇನೆ. 13 ಕಂತುಗಳನ್ನು ಕಟ್ಟಲು ಹೋಗಿದ್ದಾಗ ಬಡ್ಡಿ ಸೇರಿಸಿ ಕಟ್ಟಬೇಕೆಂದು ಕಟ್ಟಿಸಿಕೊಳ್ಳಲು ನೀರಾಕರಿಸಿರುತ್ತಾರೆ. ಮೊದಲು ಸಿಮೆಂಟ್ ಅಂಗಡಿ ಇಟ್ಟುಕೊಂಡಿದ್ದೇನು ಅಲ್ಲಿಯು ಸಹ ಬಂದು ದೂರುದಾರ ತೊಂದರೆ ಕೊಟ್ಟಿರುತ್ತಾರೆ, ಬೇರೆಯಲ್ಲಿಯು ಸಹ ಕೆಲಸ ಸಿಗದೆ ಕೂಲಿ ಕೆಲಸ ಮಾಡಿಕೊಂಡು ಜೀವನ ನಡೆಸುತ್ತಿದ್ದೇನೆ, ನನ್ನಂತ್ತೆಯೇ ಇತರ 6 ಜನರ ಮೇಲೆಯು ಸಹ ದೂರುದಾರ ತೊಂದರೆ ಕೊಡುತ್ತಿದ್ದಾರೆ. ಜಾಮೀನುದಾರರು ಸಹ ನಿಮ್ಮಿಂದಾಗಿ ನಮಗೆ ತೊಂದರೆ ಆಗಿದೆ ಎಂದು ಅವರು ಸಹ ಗಲಾಟೆ ಮಾಡುತ್ತಿದ್ದಾರೆ. ನಾನು 6 ಲಕ್ಷ ಬಾಕಿ ಕೊಡಬೇಕಾಗಿದ್ದು, ಆದರೆ ರೂ.30,40,000/- ಕ್ಕೆ ಪ್ರಕರಣ ದಾಖಲು ಮಾಡಿರುತ್ತಾರೆ. ಹಾಗಾಗಿ ನನ್ನನ್ನು ಈ ಪ್ರಕರಣದಿಂದ ದೊಷಮುಕ್ತನಾಗಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಕೆಳಕಂಡ ದಾಖಲಾತಿಗಳನ್ನು ಗುರುತಿಸಿಕೊಳ್ಳುತ್ತೇನೆ.

| | | |
|---|---|---|
| Ex.D1 | | Certified copy of the petition NO.DRB-3/CFS/DIS 37/2-24-25 |
| Ex.D2 | | Statement of objection filed by the respondent/complainant |

| | | |
|---|---|---|
| Ex.D3 | | Evidence of disputant/complainant in petition No.DRB-3/CFS/DIS 37/2-24-25 |
| Ex.D4 | | Notice for unconditional attachment issued by the disputant/complainant for Rs.18,64,885/- |
| Ex.D5 | | Chit agreement |
| Ex.D6 | | Certified copy of the order sheets in petition No.DRB-3/CFS/DIS 37/2-24-25 |
| Ex.D7 | | Reply Notice with receipt dated 24.06.2023 |
| Ex.D8 | | EC in respect of guarantor 6 property with Sale Deed |
| Ex.D9 | | Receipt issued by the complainant/disputant |
| Ex.D10 | | Bank statement. |

**<u>ಪಾಟೀ ಸವಾಲುಃ- ದೂರುದಾರರ ಪರ ವಕೀಲರಿಂದ</u>**

ನಾನು 6ನೇ ತರಗತಿಯವರೆಗೆ ವಿದ್ಯಾಬ್ಯಾಸ ಮಾಡಿದ್ದು, ಕನ್ನಡ ಬಾಷೆ ಓದಲು ಮತ್ತು ಬರೆಯಲು ಬರುತ್ತದೆ. ದೂರುದಾರರ ಬಳಿ ಚೀಟಿ ಹಾಕಿದ್ದ ಕಾರಣ ಪ್ರತಿ ತಿಂಗಳು ರೂ.50,000/- (including divident) ಕಟ್ಟಬೇಕಾಗಿತ್ತು ಎನ್ನುವುದು ಸರಿ. ಚೀಟಿ ಹಾಕುವ ಸಮಯದಲ್ಲಿ ಚಿಕ್ಕ ಸಿಮೆಂಟ್ ಅಂಗಡಿ ಇಟ್ಟಿದ್ದು, ಕೂಲಿ ಕೆಲಸವು ಸಹ ಮಾಡುತ್ತಿದ್ದೆ. ತಿಂಗಳಿಗೆ ರೂ.25 ರಿಂದ 35 ಸಾವಿರ ಸಂಪಾದಿಸುತ್ತಿದ್ದೇನು. ಆದಾಯ ತೆರಿಗೆ ಮೊದಲು ಪಾವತಿಸುತ್ತಿದ್ದೆ. 2018-19 ರಲ್ಲಿ ವಾರ್ಷಿಕ ಆದಾಯ ಎಷ್ಟು ಇತ್ತು ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ಆ ಸಮಯದಲ್ಲಿ ರೂ.6,61,000/- ತೋರಿಸಿದ್ದೇನು ಎಂದು ನುಡಿಯುತ್ತಾರೆ. ಗಣೇಶ್ ಎಂಟರ್ ಪ್ರೈಸಸ್ ಎನ್ನುವುದು ನನ್ನ ಮಾಲೀಕತ್ವಕ್ಕೆ ಸೇರಿದ್ದು, ಇದಕ್ಕೆ ಜಿ.ಎಸ್.ಟಿ. ನಂಬರ್ ಸಹ ಪಡೆದುಕೊಂಡಿದ್ದೇನು. ಆ ಅಂಗಡಿಯಲ್ಲಿ ಬೇರೆ ಉದ್ಯೋಗವು ಸಹ ಮಾಡುತ್ತೇನೆಂದು ಬೋರ್ಡ್ ಹಾಕಿದ್ದೇನು ಎಂದರೆ ಸರಿ. ಈಗಲು ಸಹ ಎಲ್ಲಾ ವ್ಯಪಾಗಳನ್ನು ಹಾಗೂ ಎಲ್ಲಾ ಕೆಲಸಗಳನ್ನು ಮುಂದುವರೆಸುತ್ತಿದ್ದೇನೆ ಎಂದರೆ ಸರಿಯಲ್ಲ. ರೂ.1,20,000/- ವನ್ನು ಕಮೀಷನ್ ಪಡೆದುಕೊಂಡಿರುತ್ತಾರೆಂದು ದೂರುದಾರರ ವಿರುದ್ಧ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಕಮೀಷನ್ ಎಂದು ಯಾವುದೇ ಹಣವನ್ನು ಪಡೆದುಕೊಂಡಿರುವುದಿಲ್ಲ, ಚೀಟಿ ಹಣ ಪಡೆಯುವ ಸಮಯಕ್ಕೆ ಕಟ್ಟಬೇಕಾದ ಬಾಕಿ ಇದ್ದ ಕಂತುಗಳಿಗೆ ಹಣ ಸರಿದೂರಿಸಲಾಗಿದೆ ಎನ್ನುವುದು ಸರಿಯಲ್ಲ. ನಾನು ಚೀಟಿ ಸದಸ್ಯನಾದ ನಂತರ ಪಾಸ್ ಬುಕ್

ಬಿಟ್ಟರೆ ಬೇರೆ ಏನು ದಾಖಲೆ ಕೊಟ್ಟಿಲ್ಲ. ದಾಖಲೆ ಹಾಜರುಪಡಿಸಲು ಯಾವುದು ತೊಂದರೆ ಇರುವುದಿಲ್ಲ.

2. 37ನೇ ಕಂತನ್ನು ಯಾವ ದಿನಾಂಕದಂದು ಕಟ್ಟಿರುತ್ತೇನೆಂದು ನೆನಪಿರುವುದಿಲ್ಲ, ಆದರೆ 2019 – 2022 ರವರೆಗೆ ಕಟ್ಟಿರುತ್ತೇನೆ. 50 ಕಂತುಗಳ ಪೈಕಿ 57 ಕಂತುಗಳನ್ನು ಕಟ್ಟಿದ್ದು, ಇನ್ನು 23 ಕಂತುಗಳು ಬಾಕಿ ಇತ್ತು ಎಂದರೆ ಸರಿಯಲ್ಲ. ಚೀಟಿಯ ಹಣ ತೆಗೆದುಕೊಂಡು ನಂತರ ಪ್ರತಿ ತಿಂಗಳು ನಿರಂತರವಾಗಿ ಚೀಟಿ ಹಣ ಕಟ್ಟುತ್ತಿರಲಿಲ್ಲ ಎಂದರೆ ಸರಿಯಲ್ಲ. ಸುಮಾರು 10 – 12 ಸಮಯ ನೋಟಿಸ್ ಗಳನ್ನು ದೂರುದಾರರು ಹಣ ಕೊಟ್ಟುವಂತೆ ಕೊಟ್ಟಿರುತ್ತಾರೆ, ನಾನು ಸಹ ಉತ್ತರ ಕೊಟ್ಟಿರುತ್ತೇನೆ. ಜೂನ್ ಅಥವಾ ಜುಲೈ 2023 ರಲ್ಲಿ ವಕೀಲರ ಮೂಲಕ ನೋಟಿಸ್ ಬಂದ ನಂತರ ಹಣ ಕಟ್ಟಲು ದೂರದಾರರ ಬಳಿ ಹೋಗಿದ್ದೇನು. ಹಣ ಕಟ್ಟುತ್ತೇವೆಂದು ದೂರುದಾರರ ಬಳಿ ಬಂದಿರುವುದಿಲ್ಲ, ಅದೇ ರೀತಿ ದೂರುದಾರರು ಬಡ್ಡಿ ಸೇರಿಸಿ ಕಟ್ಟಬೇಕೆಂದು ಹೇಳಿರುವುದಿಲ್ಲ. ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ನ್ನು ಕೊನೆಯ ಬಾರಿಗೆ ಹಣ ಕೊಡುತ್ತೇವೆಂದು ಬಂದಾಗ ರೂ.11,81,399/- ಕ್ಕೆ ಕೊಟ್ಟಿರುತ್ತೇನೆ ಎನ್ನುವುದು ಸರಿಯಲ್ಲ.

3. ದೂರುದಾರರು ನೀಡಿದ ಪಾಸ್ ಬುಕ್ ನ್ನು ಹಾಜರುಪಡಿಸಿದರೆ ನಿಜ ಸ್ಥಿತಿ ಗೊತ್ತಾಗುತ್ತದೆ ಎಂದು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ, ಮುಂದೆ ಹಾಜರುಪಡಿಸುತ್ತೇನೆ. ನ್ಯಾಯಾಲಯದ ಸಹಾನುಭೂತಿ ಪಡೆಯುವ ಉದ್ದೇಶಕ್ಕಾಗಿ ದೂರುದಾರರು ತೊಂದರೆ ಕೊಟ್ಟ ಕಾರಣ ಹಾಲಿ ಗಾರೆ ಕೆಲಸ ಮಾಡುತ್ತಿದ್ದೇನಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಉಳಿದ ಕಂತುಗಳ ಹಣಕ್ಕಾಗಿ ನಿಪಿ-2ನ್ನು ಸ್ವಂತಃ ನಾನೇ ಕೊಟ್ಟಿರುವುದರಿಂದ ಬ್ಯಾಂಕ್ ನಲ್ಲಿ ಸಾಕಷ್ಟು ಹಣ ಇಡುವ ಜವಾಬ್ದಾರಿ ನನ್ನದಾಗಿತ್ತು ಎಂದರೆ ಸರಿಯಲ್ಲ.

**ಮರು ವಿಚಾರಣೆಃ-** ಇಲ್ಲ
(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

**(ಓ. ಹೇ. ಕೇ. ಸ)**

**(ಕೆ ಎಂ ಆನಂದ್)**
**36ನೇ ಎ.ಸಿ.ಜೆ.ಎಂ.,**
**ಬೆಂಗಳೂರು.**